**ಬೆಳಗಾವಿಯ 7 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕೋಡಿ.**

**ಎಸ್ ಸಿ ನಂ. 11/2019**

ಸಿಡಬ್ಲ್ಯು 13 ಪಿಡಬ್ಲ್ಯು- 5

ದಿನಾಂಕಃ 17.02.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಪೂರ್ಣ ಹೆಸರು : ಎಮ ಐ ಹೊಸಮನಿ

ವಯಸ್ಸು : 64 ವರ್ಷ

ಉದ್ಯೋಗ : ನಿವೃತ್ತ ಎ ಎಸ ಐ

ವಾಸ ಸ್ಥಳ : ಹುಕ್ಕೇರಿ

**ಮುಖ್ಯ ವಿಚಾರಣೆಃ-** ಮಾನ್ಯ ಸರಕಾರಿ ಅಭಿಯೋಜಕರವರಿಂದಃ-

ನಾನು ಚಿಕ್ಕೋಡಿ ಪೋಲಿಸ ಠಾಣೆಯಲ್ಲಿ 2013 ರಿಂದ 2016 ರವರೆಗೆ ಪೋಲಿಸ ಮುಖ್ಯ ಪೇದೆ ಎಂದು ಸೇವೆಸಲ್ಲಿಸಿದ್ದೇನೆ. 31.12.2014 ರಂದು ರಾತ್ರಿ 08.10 ಗಂಟೆಗೆ ನಾನು ಠಾಣಾ ಎಸ ಹೆಚ್ ಓ ದಲ್ಲಿದ್ದಾಗ ಚಾಸಾ 1 ಠಾಣೆಗೆ ಬಂದು ಲಿಖಿತ ದೂರನ್ನು ಕೊಟ್ಟಿದ್ದನ್ನು ಪಡೆದುಕೊಂಡು ಗುನ್ನಾ ನಂಃ 260/2014 ರಡಿ ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿ ಮತ್ತು ಮೂಲ ಫಿರ್ಯಾಧಿಯನ್ನು ನ್ಯಾಯಾಲಯಕ್ಕೆ ಮತ್ತು ಪ್ರತಿಗಳನ್ನು ಮೇಲಾಧಿಕಾರಿಗೆ ಕಳುಹಿಸಿದೆ. ಸಾಕ್ಷಿ ನಿಪಿ 1 ನ್ನು ನೋಡಿ ಗುರುತಿಸಿದ್ದರಿಂದ ಸಾಕ್ಷಿ ಸಹಿ ನಿಪಿ 1(ಬಿ) ಎಂದು ಗುರುತಿಸಲಾಯಿತು. ಪ್ರಥಮ ವರ್ತಮಾನ ವರದಿಯನ್ನು ನೋಡಿ ಗುರುತಿಸಿದ್ದರಿಂದ ಇದನ್ನು ನಿಪಿ 7 ಸಾಕ್ಷಿ ಸಹಿ ನಿಪಿ 7(ಎ) ಎಂದು

ಗುರುತಿಸಲಾಯಿತು. ಚಾಸಾ 1 ಇನ್ನೊಂದು ಗುನ್ನಾ ನಂ. 258/2014 ರಲ್ಲಿ ಆರೋಪಿ ಇರುವುದರಿಂದ ಆ ಪ್ರಕರಣದ ತನಿಖಾಧಿಕಾರಿಗೆ ತಿಳಿಸಿದೆ. ಚಾಸಾ 1 ರ ಪುನರ ಹೇಳಿಕೆ ಪಡೆದೆ. ರ್‍ಾತ್ರಿಯಾಗಿದ್ದರಿಂದ 01.01.2015 ರಂದು ಗುನ್ನೆ ಸ್ಥಳಕ್ಕೆ ಹೋಗಿ ಚಾಸಾ 2 ಮತ್ತು 3 ರ ಸಮಕ್ಷಮ ಚಾಸಾ 9 ತೋರಿಸಿದ ಗುನ್ನೆ ಜಾಗೆಯ ಪಂಚನಾಮೆಯನ್ನು ಬೆಳಗ್ಗೆ 09.00 ರಿಂದ 10.00 ಗಂಟೆಯವರೆಗೆ ಮಾಡಿ ಅಲ್ಲಿದ್ದ 4 ಬಡಿಗೆ ಮತ್ತು 2 ಕಲ್ಲುಗಳನ್ನು ಜಪ್ತಿ ಮಾಡಿದೆ. ಸಾಕ್ಷಿ ಮು.ಮಾ1 ರಿಂದ 5 ನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ಇನ್ನೊಂದು ಕಲ್ಲು ನೋಡಿ ಗುರುತಿಸಿದ್ದು ಇದನ್ನು ಮು.ಮಾ.6 ಎಂದು ಗುರುತಿಸಲಾಯಿತು. ನಂತರ ಚಾಸಾ 8 ರಿಂದ 10 ರ ಹೇಳಿಕೆ ಪಡೆದೆ. ಮುಂದಿನ ತನಿಖೆಯನ್ನು ಚಾಸಾ 14 ರಿಗೆ ಒಪ್ಪಿಸಿದೆ.

**<u>ಪಾಟೀ ಸವಾಲುಃ</u>-** ಆರೋಪಿ ಪರ ಶ್ರೀ ಎಸ ಎಸ ಡಿ ವಕೀಲರಿಂದಃ

ಸರ್ಕಾರಿ ದವಾಖಾನೆಯಿಂದ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವದೇ ಎಮ ಎಲ್ ಸಿ ಬಂದಿರಲಿಲ್ಲ. ಫಿರ್ಯಾಧಿಯನ್ನು ನನ್ನ ಮುಂದೆ ಕುಳಿತು ಬರೆದು ಕೊಟ್ಟರು. ಈ ಫಿರ್ಯಾಧಿ ಕೊಡುವ ಮೊದಲೇ 8 ನೇ ಆರೋಪಿ ಫಿರ್ಯಾಧಿ ಕೊಟ್ಟಿದ್ದ ಅನ್ನುವದು ನಿಜ. ಫಿರ್ಯಾಧಿ ಕೊಡಲು ಒಬ್ಬನೇ ಬಂದಿದ್ದ. ನಾನು ಆಸ್ಪತ್ರೆಗೆ ಬೇಟಿ ಕೊಟ್ಟಿಲ್ಲ. ನಾನು ಯವದೇ ಸಾಕ್ಷಿದಾರರ ಹೇಳಿಕೆ ಪಡೆದಿಲ್ಲ ಅನ್ನುವುದು ಸರಿಯಲ್ಲ. ನಾನು ಯಾವದೇ ಪಂಚನಾಮೆ ಮಾಡಿಲ್ಲ ಮತ್ತು

ಮು.ಮಾ.1 ರಿಂದ 6 ನ್ನು ಜಪ್ತಿ ಮಾಡಿಲ್ಲ ಅನ್ನುವುದು ಸರಿಯಲ್ಲ. ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕ ಮಂಜುನಾಥನ ಎದುರು ಸುಳ್ಳು ಫಿರ್ಯಾಧಿ ಪಡೆದಿದ್ದೇನೆ ಅನ್ನುವುದು ಸರಿಯಲ್ಲ.

**ಮರು ಮುಖ್ಯ ವಿಚಾರಣೆ** : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು.)

(ಸಾಕ್ಷಿಗೆ ಓ ಹೆ ಕೆ ಸರಿ ಅದೆ ಅಂತಾ ಹೇಳುತ್ತಾರೆ)

ಬೆಳಗಾವಿಯ 7 ನೇ ಹೆಚ್ಚುವರಿ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು, ಚಿಕ್ಕೋಡಿ.